# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ಕೇಸ್ ನಂ. 6/2017**

**ದೋ.ಸಾ. : 19 ಪ್ರಾ.ಸಾ. : 16**

ಸಾಕ್ಷಿಯ ಹೆಸರು : ರಾಜಶ್ರೀ ಗಿರೀಶ ನಾಯ್ಕ
ಗಂಡನ ಹೆಸರು : ಗಿರೀಶ ನಾಯ್ಕ
ವಯಸ್ಸು : 47 ವರ್ಷ
ಕೆಲಸ : ಡಬ್ಲ್ಯೂ.ಹೆಚ್.ಸಿ. -632, ಹೊನ್ನಾವರ ಪೋಲೀಸ್ ಠಾಣೆ
ವಾಸ : ಹೊನ್ನಾವರ

**ದಿನಾಂಕಃ 22-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

2016 ರಿಂದ 2021 ರವರೆಗೆ ನಾನು ಭಟ್ಕಳ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ಡಬ್ಲ್ಯೂ .ಹೆಚ್.ಸಿ. ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 03-05-2016 ರಂದು ತನಿಖಾಧಿಕಾರಿ ಚಾಸಾ 21 ರವರು ಪಂಚನಾಮೆ ಕಾಲಕ್ಕೆ ಹಾಜರಿದ್ದು, ತನಿಖೆಗೆ ಸಹಕರಿಸುವಂತೆ ಸೂಚಿಸಿದ ಮೇರೆಗೆ, ನಾನು ಭಟ್ಕಳ ತಾಲೂಕು ಹೆಬಳೆ ಗ್ರಾಮದ ತೆಂಗಿನಗುಂಡಿ ರಸ್ತೆಯ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು, ಪಂಚರು ಹಾಗೂ ತನಿಖಾಧಿಕಾರಿಯವರು ಸೂಚಿಸಿದ ಮೇರೆಗೆ ಪಂಚನಾಮೆಯನ್ನು ನಾನೇ ಬರೆದು ರುಜು ಮಾಡಿರುತ್ತೇನೆ ಹಾಗೂ ಸದ್ರಿ ಪಂಚನಾಮೆಗೆ ತನಿಖಾಧಿಕಾರಿ, ಪಂಚರಾದ ಚಾಸಾ 2 ಮತ್ತು 3 ಹಾಗೂ ಚಾಸಾ 6 ರವರ ರುಜುವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ 10(ಇ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ನ್ಯಾಯವಾದಿ ಶ್ರೀ ಎ. ಜಿ. ಎನ್. ವಕೀಲರಿಂದಃ**

2. ನಾನು ತನಿಖಾಧಿಕಾರಿ ಹಾಗೂ ಪಂಚರೊಂದಿಗೆ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಬರೆದಿಲ್ಲ ಎಂದರೆ ಸರಿ ಅಲ್ಲ. ಪಂಚನಾಮೆ ಕಾಲಕ್ಕೆ ತೆಗೆದ ನಿಪಿ 11 ಛಾಯಾಚಿತ್ರದಲ್ಲಿ ನಾನು ಇರುವುದಿಲ್ಲ. ನಾನು ಪಂಚನಾಮೆಗೆ ಹೋಗಿದ್ದರೆ

ನಿಪಿ 11 ರಲ್ಲಿ ಇರುತ್ತಿದ್ದೆ ಎಂದರೆ ಸರಿ ಅಲ್ಲ. ನಾನು ತನಿಖಾಧಿಕಾರಿಗೆ ಸಹಾಯ ಮಾಡಲೆಂದು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ –ಇಲ್ಲಾ–**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ